

# ಲಬೋಸಾದಲ್ಲಿ ಒಂದು ದಿನ

ಭೂತಾನ್‌ನ ಸಣ್ಣ ಊರು ಲಬೋಸಾ ಅಂತರರಾಷ್ಟ್ರೀಯ ಪ್ರವಾಸಿ ಕೇಂದ್ರ. ನಿಗೂಢ ಹಾಗೂ ಪವಿತ್ರವಾದುದನ್ನು ಪ್ರೇಕ್ಷಣೀಯ ಮಾಡುವ ಟೂರಿಸಂನ ಗುಣವನ್ನು ಲಬೋಸಾದಲ್ಲೂ ಕಾಣಬಹುದು. ಈ ಪುಟ್ಟ ಹಳ್ಳಿ ದೊರಕಿಸಿಕೊಟ್ಟ ವಿಶಿಷ್ಟ ಅನುಭವ ಚಿಂತನೆಗಳು ಸಂಸ್ಕೃತಿಯನ್ನು ಭಿನ್ನ ಆಯಾಮದಲ್ಲಿ ಗ್ರಹಿಸಬಹುದಾದ ನೋಟವೊಂದನ್ನು ಕಾಣಿಸುವಂತಿದೆ.

■ **ರಹಮತ್ ತರೀಕೆರೆ**

ನನಗೆ ಸಾವಿರಾರು ವರ್ಷಗಳಿಂದಲೂ ಬೌದ್ಧಧಮ್ಮವು ಜೀವಂತವಾಗಿ ನೆಲೆಸಿರುವ ಸಮಾಜವನ್ನು ನೋಡಬೇಕಿತ್ತು. ಭಾರತದಲ್ಲಿ ಅದು ಪಳೆಯುಳಿಕೆಗಳಿಂದ ಮೇಲೆದ್ದು ಹೊಸತಾಗಿ ಮೊಳೆಯುತ್ತಿರುವ ಚಿಗುರು. ಕಾಂಬೋಡಿಯಾ, ಶ್ರೀಲಂಕಾ, ಮ್ಯಾನ್ಮಾರ್, ಭೂತಾನಗಳಲ್ಲಿ ಧಮ್ಮವು ಹೀಗೆ ಆಳವಾಗಿ ಬೇರುಬಿಟ್ಟಿದೆ. ಅದರ ಒಂದು ವರ್ಣರಂಜಿತ ಅಧ್ಯಾಯವನ್ನು ಕಾಣಲು ಭೂತಾನಕ್ಕೆ ಹೋದೆನು.

ಭೂತಾನದಲ್ಲಿ ಧಮ್ಮಕ್ಕೆ ಸಂಬಂಧಿಸಿದಂತೆ ಎದ್ದು ಕಾಣುವ ಕುರುಹುಗಳೆಂದರೆ, ವರ್ಣರಂಜಿತವಾದ ಚಿತ್ರಕಲೆಯಿಂದಲೂ ಮೂರ್ತಿಗಳಿಂದಲೂ ಕೂಡಿದ ವಿಹಾರಗಳು; ಎತ್ತರದ ಪರ್ವತಗಳ ಮೇಲೆ ಸ್ಥಾಪಿಸಲಾದ ಬೃಹದಾಕಾರದ ಬುದ್ಧನ ಮೂರ್ತಿಗಳು; ಮನೆಗಳ ಮುಂದೆ ಸಾಂಪೊ ಎನ್ನಲಾಗುವ ಹೂಜಿಯಾಕಾರದ ಹೊಗೆಗೂಡುಗಳು (ಇವುಗಳಲ್ಲಿ ಬೆಳಬೆಳಗ್ಗೆಯೇ ಸುಗಂಧದ ಚಕ್ಕೆ ಅಥವಾ ದೇವದಾರು ಗಿಡದ ಎಲೆಗಳನ್ನಿಟ್ಟು ಧೂಪದಂತೆ ಪವಿತ್ರ ಹೊಗೆ ಎಬ್ಬಿಸುವರು. ಈ ಹೊಗೆ ಹತ್ತಿಯ ಎಳೆಯಂತೆ ಹರಡಿದ ತಂಪು ಹವೆಯ ಭಾರತವನ್ನು ಸೀಳಿಕೊಂಡು ಮೆಲ್ಲಗೆ ಮೇಲೇರುತ್ತ, ರೇಷ್ಮೆಯ ಬಿಳಿಪತ್ತಲವು ಆಗಸದಲ್ಲಿ ಹಾರಾಡುತ್ತಿರುವಂತೆ ಭಾಸವಾಗುತ್ತದೆ); ಸತ್ತವರ ಹೆಸರಲ್ಲಿ ಮಂತ್ರ ಬರೆದ ಪತಾಕೆಗಳನ್ನು ಪರ್ವತಗಳ ಶಿಖರಗಳಲ್ಲಿ ತೋರಣಗಳಂತೆ ಕಟ್ಟುವುದು (ಬಿಸಿಲು ಮಳೆ ಹಿಮಪಾತಗಳಿಗೆ ಸಿಲುಕಿ ಇವುಗಳ ಅಕ್ಷರ ಬಣ್ಣವೆಲ್ಲ ಅಳಿದು, ಇವನ್ನು ಕಟ್ಟಿಸಿಕೊಂಡ ಪರ್ವತಗಳು ಲಂಗರು ಹಾಕಿದ ಹಾಯಿ ಹಡಗುಗಳಂತೆ ತೋರುತ್ತವೆ); ಮನೆ, ಅಂಗಡಿ, ವಿಹಾರ, ಹೋಟೆಲು, ಕಚೇರಿಗಳಲ್ಲಿ ಲಗತ್ತಿಸಿರುವ ಬುದ್ಧ, ಭೂತಾನದ ದೊರೆ ಮತ್ತು ಲಾಮಾಗಳು ಒಂದೇ ಚೌಕಟ್ಟಿನಲ್ಲಿರುವ ಪಟಗಳು. ಪ್ರಶ್ನೆಯೆಂದರೆ, ಹೊರಗಿನಿಂದ ಬಂದ ಧಮ್ಮವು ಸ್ಥಳೀಯ ಬುಡಕಟ್ಟು ಸಂಸ್ಕೃತಿಯಿಂದ ಬೌದ್ಧವು ಏನನ್ನೂ ಪಡೆದುಕೊಳ್ಳಲಿಲ್ಲವೇ? ಇದಕ್ಕೆ ಉತ್ತರ, ನಾವು ಭೇಟಿ ಮಾಡಿದ ಲಬೋಸಾ ಎಂಬ ಹಳ್ಳಿಯಲ್ಲಿ ಸಿಕ್ಕಿತು.

ನಾವು ಲಬೋಸಾಕ್ಕೆ ಹೋಗಿದ್ದು ಆಕಸ್ಮಿಕವಾಗಿ. ಯಾವುದಾದರೂ ಒಂದು ಹಳ್ಳಿಯಲ್ಲಿ ಕನಿಷ್ಠ ಸೌಲಭ್ಯದಲ್ಲೇ ಕಳೆಯುವ ಇರಾದೆ ನಮಗಿತ್ತು. ಟ್ಯಾಕ್ಸಿ ಚಾಲಕನು ನಮಗೆ ಸುಪ್ರಸಿದ್ಧ ಮತ್ತು ಪ್ರಾಚೀನ ಬೌದ್ಧವಿಹಾರವಿರುವ ಲಬೋಸಾಕ್ಕೆ ಕರೆದೊಯ್ದನು. ಕಾರು ಪರ್ವತದ ಸೊಂಟಕ್ಕೆ

